

# ‘ಹಾರುಬೆಕ್ಕು’ಗಳಿಗೆ ನಿತ್ಯ ಶಾಕ್!

ಚಿತ್ರ-ಬರಹ:
ಜಿ.ಎಂ.ಬೊಮ್ನಳ್ಳಿ ಶಿರಸಿ



ಪರಿಸರ ಮತ್ತು ಅದಕ್ಕೆ ಪೂರಕವಾದ ಜೀವ ಜಗತ್ತು ಸಮತೋಲನದಲ್ಲಿದ್ದರೆ ಜಗತ್ತೇ ಸುಂದರ. ಆದರೆ, ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಬದಲಾವಣೆಗಳಿಂದ ಎಲ್ಲವೂ ಏರುಪೇರು. ಮನುಷ್ಯರಿಗಿಂತ ಕಾಡಿನ ಪ್ರಾಣಿ– ಪಕ್ಷಿಗಳು ಇದರ ನೇರ ಪರಿಣಾಮ ಎದುರಿಸುತ್ತಿವೆ. ಇದಕ್ಕೆ ಒಂದು ನಿದರ್ಶನ ಹಾರು ಬೆಕ್ಕುಗಳು.

ಹಳ್ಳಿಯ ಪ್ರತಿ ಮನೆಗೂ ವಿದ್ಯುತ್ ಸಂಪರ್ಕ ಇರಬೇಕಾದ್ದು ಇಂದಿನ ಅವಶ್ಯಕತೆ. ಮಲೆನಾಡಿನ ಕೆಲವು ಹಳ್ಳಿಗಳಿಗೆ ದಟ್ಟ ಕಾಡಿನ ನಡುವೆಯೇ ವಿದ್ಯುತ್ ತಂತಿಗಳು ಹಾದು ಹೋಗಿರುತ್ತವೆ. ಉತ್ತರ ಕನ್ನಡದ ಕಾಡುಗಳಲ್ಲಿ ಹೆಚ್ಚಾಗಿ ಕಂಡುಬರುವ ‘ಹಾರು ಬೆಕ್ಕು’ ಎಂದು ಕರೆಯುವ ಈ ಪುಟ್ಟ ಪ್ರಾಣಿ ನೋಡಲು ಕಪ್ಪು ಮೊಲದ ಆಕಾರದಲ್ಲಿದ್ದು, ಹಾರಲು ರೆಕ್ಕೆ ಮತ್ತು ಉದ್ದನೆಯ ಬಾಲ ಹೊಂದಿರುತ್ತವೆ.

ಇವು ಹುಳಿಮಾವಿನ ಕಾಯಿಗಳನ್ನು ತಿನ್ನಲು ಕಾಡಿನಿಂದ ಹಳ್ಳಿಗಳತ್ತ ಹಾರಿ ಬರುತ್ತವೆ. ಹೀಗೆ ಮರದಿಂದ ಮರಕ್ಕೆ ಹಾರಿ ಬರುವ ಸಂದರ್ಭದಲ್ಲಿ ಹಲವಾರು ಹಾರುಬೆಕ್ಕುಗಳು ವಿದ್ಯುತ್ ತಂತಿಗಳಿಗೆ ತಾಗಿ ಜೀವ ಬಿಡುತ್ತವೆ. ದಿನ ಬೆಳಗಾದರೆ ವಿದ್ಯುತ್ ತಂತಿಗಳ ಕೆಳಗೆ ಶಾಕ್‌ನಿಂದ ಅರೆಜೀವವಾಗಿ ಒದ್ದಾಡುತ್ತಿರುವ ಹಾರುಬೆಕ್ಕುಗಳನ್ನು ಕಾಣುವ ಸಂದರ್ಭ.

ಈ ಹಾರುಬೆಕ್ಕುಗಳ ಸಾವನ್ನು ತಪ್ಪಿಸುವುದು ಹೇಗೆ? ಇದಕ್ಕೆ ನೇರ ಕಾರಣರು ಯಾರು? ಎನ್ನುವ ಪ್ರಶ್ನೆಗಳಿಗೆ ಉತ್ತರ ಕಷ್ಟ. ಕಾಡಾನೆಗಳು ಹೀಗೆ ವಿದ್ಯುತ್ ತಂತಿ ತುಳಿದು ಸತ್ತರೆ ದೊಡ್ಡ ಸುದ್ದಿಯಾಗುತ್ತದೆ. ಅರಣ್ಯ ಇಲಾಖೆಯ ಅಧಿಕಾರಿಗಳ ದಂಡೇ ನೆರೆಯುತ್ತದೆ. ಆದರೆ ಬಡಪಾಯಿ ಪ್ರಾಣಿಗಳಾದ ಹಾರುಬೆಕ್ಕುಗಳ ಜೀವಕ್ಕೆ ಅಷ್ಟು ದೊಡ್ಡ ಬೆಲೆ ಇಲ್ಲ. ಹಾಗಾಗಿ ಯಾರೂ ಏನೂ ಮಾಡಲಾಗುತ್ತಿಲ್ಲ.